ಅಹನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




2021–22ರ 'ಪಂಪ ಪ್ರಶಸ್ತಿ' ಪುರಸ್ಕೃತ ಖ್ಯಾತ ಲೇಖಕ ಡಾ॥ ಬಾಬು ಕೃಷ್ಣಮೂರ್ತಿ ಅವರಿಗೆ ಗೌರವಾರ್ಪಣೆ ಮತ್ತು ಅವರೊಂದಿಗೆ ಮಾತುಕತೆ ಕಾರ್ಯಕ್ರಮ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆಯಿತು.

ಸಂಪುಟ : 45 | ಸಂಚಿಕೆ : 2 | ವೈಶಾಖ–ಜ್ಯೇಷ್ಠ | ಕಲಿಯುಗಾಬ್ದ 5125 | 01–05–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಪ್ರಜಾಪ್ರಭುತ್ವದ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ, ಜವಾಬ್ದಾರಿಯನ್ನು ಅರಿತು ಮತದಾನದ ಫಲವನ್ನು ಸವಿಯೋಣ

ಹಬ್ಬಗಳ ರಾಷ್ಟ್ರವೆಂದು ಕರೆಯಲ್ಪಡುವ ಭಾರತದಲ್ಲಿ ನಾವು ಆಚರಿಸುವ ಹಲವು ಹಬ್ಬಗಳಿಗೆ ಜಗತ್ತೇ ನಿಬ್ಬೆರಗಾಗುತ್ತದೆ. ಅಂತಹ ಹಬ್ಬಗಳಲ್ಲಿ ಪ್ರಜಾಪ್ರಭುತ್ವದ ಹಬ್ಬವೂ ವಿಶೇಷ ಮಾನ್ಯತೆ ಪಡೆದಿದೆ! ಜಗತ್ತಿನ ಉಳಿದ ದೇಶಗಳು ಭಾರತದ ಸಾರ್ವತ್ರಿಕ ಚುನಾವಣೆಯನ್ನು ಬೆರಗುಗಣ್ಣಿನಿಂದ ನೋಡುತ್ತದೆ. ಅದರ ಫಲಿತಾಂಶದ ಕುರಿತು ತಲೆಕೆಡಿಸಿಕೊಳ್ಳುವಷ್ಟು ರಾಜತಾಂತ್ರಿಕವಾದ ಛಾಪನ್ನು ಭಾರತ ಪಡೆದುಕೊಂಡಿದೆ. ಪಾರದರ್ಶಕವಾಗಿ ಮತ್ತು ಪರಿಣಾಮಾತ್ಮಕವಾಗಿ ನಡೆಯುವ ಮೂಲಕ ವಿಶ್ವಮಾನ್ಯತೆ ಪಡೆದ ನಮ್ಮ ನಾಡಿನ ಚುನಾವಣೆಗಳಲ್ಲಿ ಪ್ರಮಾಣಿಕವಾಗಿ ಭಾಗವಹಿಸಬೇಕಾದದ್ದು ನಮ್ಮ ಜವಾಬ್ದಾರಿಯಾಗಿದೆ.

### ಯುವಕರು ಮತ್ತು ಮತದಾನ

ಪ್ರತಿಯೊಬ್ಬ ವ್ಯಕ್ತಿಯ ಜೀವನದ ಸುಗ್ಗಿ ಕಾಲ ಯೌವನ. ತನ್ನ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಅರಿತು, ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ಚಾರಿತ್ರ್ಯವನ್ನು ರೂಪಿಸಿಕೊಂಡು ನಾಗರಿಕರಾಗಲು ಮುಂದಡಿಯನ್ನು ಇಡುವ ಪರ್ವ ಕಾಲ. ಒಟ್ಟು ಜನಸಂಖ್ಯೆಯ ಶೇ. 60ರಷ್ಟು ಯುವಕರನ್ನು ಹೊಂದುವ ಮೂಲಕ ಜಗತ್ತಿನ ಅತ್ಯಂತ ಯುವರಾಷ್ಟ್ರವಾದ ಭಾರತದಲ್ಲಿ ರಾಷ್ಟ್ರದ ಬದಲಾವಣೆಯ ಹಿಂದಿನ ಶಕ್ತಿಯೂ ಯುವಕರೇ ಆಗಿದ್ದಾರೆ. ಯೌವನಕ್ಕೆ ಕಾಲಿಟ್ಟ ಕೂಡಲೇ ತನ್ನ ಮನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೊದಲೇ ಅವರು ನಿರ್ವಹಿಸುವ ಮತ್ತು ನಿರ್ವಹಿಸಲೇ ಬೇಕಾದ ಬಹುದೊಡ್ಡ ಜವಾಬ್ದಾರಿ ಮತದಾನ.




### ಹೊಸಮತದಾರರೇ ಕಿಂಗ್‌ಮೇಕರ್

ಮತದಾನದಲ್ಲಿ ಯುವಕರ ಪಾತ್ರ ಬಹುದೊಡ್ಡ ಪರಿಣಾಮವನ್ನು ಬೀರುತ್ತದೆ. ಪ್ರತಿ ಐದು ವರ್ಷಕ್ಕೊಮ್ಮೆ ಹೊಸ ಮತದಾರರ ಬಹುದೊಡ್ಡ ಸಂಖ್ಯೆ ಮತದಾನಕ್ಕೆ ಸಿದ್ಧವಾಗುತ್ತದೆ. ಭವಿಷ್ಯದ ಕಂಗಳಲ್ಲಿ, ಭರವಸೆಯ ನಾಳೆಗಳನ್ನು ನಿರ್ಮಿಸುವ ಉತ್ಸಾಹದಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮುಂದಾಗುತ್ತಾರೆ. ಇದಕ್ಕೆ 2014 ಮತ್ತು 2019ರ ಸಾರ್ವತ್ರಿಕ ಚುನಾವಣೆಯೇ ಉತ್ತಮ ನಿದರ್ಶನ. ಅದರಲ್ಲೂ ಹೊಸಮತದಾರರ ಪ್ರಾಲ್ಗೊಳ್ಳುವಿಕೆ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. 2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಕ್ರಮಶಃ 2.4 ಮತ್ತು 4.5 ಕೋಟಿ ಹೊಸಮತದಾರರು ರಾಷ್ಟ್ರದ ರಾಜಕಾರಣದಲ್ಲಿನ ಬದಲಾವಣೆಯಲ್ಲಿ ಮಹತ್ತರದ ಕಾರಣವಾಗಿದ್ದರು. ಈ ಬಾರಿಯ ರಾಜ್ಯದ ಚುನಾವಣೆಯಲ್ಲೂ ಹೊಸಮತದಾರರ ಸಂಖ್ಯೆ ನಿರ್ಣಾಯಕ ಪಾತ್ರವನ್ನು ವಹಿಸಲಿದ್ದು ಅವರೆಲ್ಲರೂ ಮತದಾನವನ್ನು ಮಾಡುವಂತೆ ಮಾರ್ಗದರ್ಶನ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

**ರಾಷ್ಟ್ರೀಯ ಕರ್ತವ್ಯವನ್ನು ನೆರವೇರಿಸುವ ಜವಾಬ್ದಾರಿ ನಮ್ಮದು:** ಮತದಾನ ಎನ್ನುವುದು ನಮ್ಮೆಲ್ಲರ ಪಾಲಿನ ರಾಷ್ಟ್ರೀಯ ಕರ್ತವ್ಯ. ಅದನ್ನು ನಮ್ಮ ಪ್ರಥಮ ಆದ್ಯತೆಯೆಂದು ನೆರವೇರಿಸಬೇಕು. ರಾಷ್ಟ್ರದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸದೃಢಗೊಳಿಸಲು, ಅಧಿಕಾರಕ್ಕಾಗಿಯಲ್ಲದೆ, ಜವಾಬ್ದಾರಿಯೆಂದು ಕಾರ್ಯನಿರ್ವಹಿಸುವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಮಗಿರುವ ಜವಾಬ್ದಾರಿಯಾಗಿದೆ. ನಾವು ಆಲೋಚಿಸಿ ಆರಿಸುವ ಒಬ್ಬೊಬ್ಬ ಜನಪ್ರತಿನಿಧಿ ನಮ್ಮ ಸಮಾಜದ ಏಳಿಗೆಗಾಗಿ ದುಡಿಯುವವನಾಗುತ್ತಾನೆ. ಹಾಗಾಗಿ ಉತ್ತಮರನ್ನು ಆರಿಸುವ ಶಕ್ತಿ ಪ್ರತಿ ಮತದಾರನಿಗಿದೆ. ಶಕ್ತಿಯನ್ನು ವ್ಯರ್ಥಗೊಳಿಸದಿರೋಣ.

**100% ಮತದಾನ ಅಭಿವೃದ್ಧಿಗೆ ವರದಾನ:** ರಾಷ್ಟ್ರ ಮತ್ತು ರಾಜ್ಯಕ್ಕೆ ಜನಪ್ರತಿನಿಧಿಗಳನ್ನು ಚುನಾಯಿಸುವ ಮೂಲಕ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ನಾವೂ ಕೈಜೋಡಿಸುವುದಕ್ಕಾಗುತ್ತದೆ. ಆದರೆ ಪ್ರಸ್ತುತ ಅನೇಕ ವಿಧಾನಸಭಾ ಕ್ಷೇತ್ರಗಳ ಒಟ್ಟು ಮತದಾನದ ಅಂಕಿಅಂಶಗಳನ್ನು ಗಮನಿಸಿದರೆ ಶೇ.50ಕ್ಕಿಂತಲೂ ಕಡಿಮೆ ಇರುವುದು ತಿಳಿದು ಬರುತ್ತದೆ. ಇದರಿಂದ ನಾವು ನಮ್ಮ ಜವಾಬ್ದಾರಿಯನ್ನು ಮರೆತು, ಪ್ರಶ್ನಿಸುವ ನೈತಿಕ ಹಕ್ಕನ್ನು ಕಳೆದುಕೊಂಡು ಅಭಿವೃದ್ಧಿ ಕುಂಟಿತವಾಗುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ನಮ್ಮ ಮತದಾನಕ್ಕಿರುವ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡು ಸದೃಢ ಸಮಾಜವನ್ನು ಕಟ್ಟಲು ಮುಂದಾಗೋಣ. ಹಾಗೆಯೇ ಮತದಾನ ಮಾಡಿದವರಿಗೆ ಮಾತ್ರ ವ್ಯವಸ್ಥೆಯನ್ನು ಪ್ರಶ್ನಿಸುವ ನೈತಿಕ ಹಕ್ಕಿರುವುದರಿಂದ ಶೇ.100 ರಷ್ಟು ಮತದಾನ ಮಾಡಿ ಸಮೃದ್ಧ ಸಮಾಜವನ್ನು ನಿರ್ಮಿಸೋಣ.

### ಮತದಾನದ ಕುರಿತು ಬೇಡ ಋಣಾತ್ಮಕ ಭಾವನೆ, ಇರಲಿ ಧನಾತ್ಮಕ ಆಲೋಚನೆ

ಪ್ರಸ್ತುತ ಅನೇಕ ಕಾರಣಗಳಿಂದ ಮತದಾನ ಮಾಡುವುದು ನಮ್ಮ ರಾಷ್ಟ್ರೀಯ ಕರ್ತವ್ಯ ಎನ್ನುವುದನ್ನು ನಾವು ಮರೆತಿದ್ದೇವೆ. ರಾಜಕೀಯ ಕೆಸರೆರೆಚಾಟ, ನಂಬಿಕೆಯನ್ನು ಉಳಿಸಿಕೊಳ್ಳದ ವ್ಯವಸ್ಥೆ, ಜನಸಾಮಾನ್ಯರಿಗೆ ಅರಿಯುವುದಕ್ಕೆ ಕಷ್ಟವಾಗುವಂತಹ ಸರ್ಕಾರಿ ನಿಯಮಗಳು, ನೊಂದವರ ಸಹಕಾರಕ್ಕೆ ಬಾರದ ಅಧಿಕಾರಿ ವರ್ಗ ಹೀಗೆ ಅನೇಕ ಕಾರಣಗಳಿಗೆ ಮತದಾನ ಪ್ರಕ್ರಿಯೆಯ ಕುರಿತು ನಿಲಕ್ಷ್ಯ ಮೂಡಿರಬಹುದು. ಹಾಗೆಯೇ ಈ ಕಾರಣಗಳ ಜೊತೆಗೆ ನಮ್ಮ ಜಾತಿಯ ಅಭ್ಯರ್ಥಿಗೆ ಅವಕಾಶ ಸಿಗಲಿಲ್ಲ, ನಾವು ಸೂಚಿಸಿದ ನಾಯಕರಿಗೆ ಮನ್ನಣೆ ದೊರೆಯಲಿಲ್ಲ ಎಂಬಿತ್ಯಾದಿ ಸ್ವಾರ್ಥದ ಕಾರಣಗಳಿಂದಲೂ ಮತದಾನ ಬಹಿಷ್ಕಾರದ ನಿರ್ಧಾರಕ್ಕೆ ಅನೇಕರು ಬರುವುದಿದೆ. ಇಂತಹ ಸಂದರ್ಭದಲ್ಲಿ ದೇಶ ಮೊದಲು, ಎಂಬ ಭಾವದೊಂದಿಗೆ ಸಮಾಜ ಹಿತಕ್ಕೆ ಸಹಕಾರಿಯಾಗುವ



ಮತದಾನ ಪ್ರಕ್ರಿಯೆಯಲ್ಲಿ ನಾವು ಭಾಗವಹಿಸಿ ನಮ್ಮ ಕರ್ತವ್ಯವನ್ನು ನಿಭಾಯಿಸಬೇಕು. ನಮ್ಮ ಒಂದೊಂದು ಮತಕ್ಕೂ ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸುವ ಜನಪ್ರತಿನಿಧಿಯನ್ನು ಚುನಾಯಿಸುವ, ಐದು ವರ್ಷಗಳ ಕಾಲ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ವ್ಯಕ್ತಿಯನ್ನು ಆರಿಸುವ ಬಹುದೊಡ್ಡ ಶಕ್ತಿ ಇದೆ. ಅದೆಲ್ಲದ್ದಕ್ಕಿಂತಲೂ ಹೆಚ್ಚಾಗಿ ನಾವು ಚುನಾಯಿಸಿದ ಅಭ್ಯರ್ಥಿ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದಾದರೆ ಅವನನ್ನು ಪ್ರಶ್ನಿಸುವ ನೈತಿಕ ಹಕ್ಕೂ ನಮಗಿರುತ್ತದೆ. ಅನ್ಯ ಕಾರಣಗಳಿಂದ ನಾವು ಈ ನಮ್ಮ ರಾಷ್ಟ್ರೀಯ ಕರ್ತವ್ಯದಿಂದ ವಿಮುಖರಾಗಬಾರದು.

**ಮತದಾನ ಬಹಿಷ್ಕಾರ ರಾಷ್ಟ್ರ ಹಿತದ ತಿರಸ್ಕಾರ:** ಹಲವು ಬಾರಿ ಅಭಿವೃದ್ಧಿಯ ಕೊರತೆಯಿಂದಾಗಿ, ಹಿಂದಿನ ಬಾರಿ ಆಯ್ಕೆಯಾದ ಜನಪ್ರತಿನಿಧಿಯ ನೀರಸ ಪ್ರತಿಕ್ರಿಯೆಗಳಿಂದ ಬೇಸತ್ತು ಮತದಾನ ಬಹಿಷ್ಕಾರದ ಕೂಗು ಹಲವೆಡೆ ಕೇಳಿ ಬರುವುದನ್ನು ನಾವು ನೋಡುತ್ತೇವೆ. ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಆಗದಿದ್ದಾಗ ಪ್ರಶ್ನಿಸಬೇಕು. ಆದರೆ ನಮ್ಮ ರಾಷ್ಟ್ರೀಯ ಕರ್ತವ್ಯವಾದ ಮತದಾನವನ್ನು ಬಹಿಷ್ಕರಿಸುವುದು ನಾಡಿಗೆ ನಾವು ಮಾಡುವ ಅನ್ಯಾಯ. ಕೆಲಸ ಮಾಡದ ಜನಪ್ರತಿನಿಧಿಯನ್ನು ಬದಲಾಯಿಸುವ ಶಕ್ತಿ ನಮ್ಮ ಮತಕ್ಕಿರುವಾಗ ಅದನ್ನು ಬಹಳ ಸಮರ್ಥವಾಗಿ ಬಳಸಿ ಸೂಕ್ತ ಜನಪ್ರತಿನಿಧಿಗಳನ್ನು ಆರಿಸಬೇಕು.

**ನೋಟಾ ಬೇಡ:** ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮ ಜನಪ್ರತಿನಿಧಿಯಾಗಲು ಶೇ.100ರಷ್ಟು ಅರ್ಹತೆ ಇರುವ ಒಳ್ಳೆಯ ಅಭ್ಯರ್ಥಿ ಕೆಲವೊಮ್ಮೆ ಸಿಗದೇ ಇರಬಹುದು. ಪ್ರಜಾತಂತ್ರದ ವ್ಯವಸ್ಥೆಯ ವೈಶಿಷ್ಟ್ಯವೇ ಇರುವವರಲ್ಲಿ ಉತ್ತಮರ ಆಯ್ಕೆಯನ್ನು ಮಾಡುವುದಾಗಿದೆ. ಲಭ್ಯವಿರುವ ಉತ್ತಮ (ಅವೈಲೆಬಲ್ ಬೆಸ್ಟ್)ರನ್ನು ನಾವು ಆಯ್ಕೆ ಮಾಡಿ ನಮ್ಮ ಜನಪ್ರತಿನಿಧಿಯನ್ನು ಆರಿಸಬೇಕು. ನಾವು ಬಯಸಿದಂತೆ ಅಭ್ಯರ್ಥಿಗಳಿಲ್ಲ ಎಂದು ನೋಟಾ ಒತ್ತಿದರೆ, ಇರುವ ಒಳ್ಳೆಯ ಅಭ್ಯರ್ಥಿಯನ್ನು ನಾವು ಕಳೆದುಕೊಳ್ಳುತ್ತೇವೆ ಮತ್ತು ನಮ್ಮ ಈ ಕಾರ್ಯದ ಫಲವನ್ನು ಲಭ್ಯವಿರುವ ಕಳಪೆ (ಅವೈಲೆಬಲ್ ವರ್ಸ್ಟ್) ಅಭ್ಯರ್ಥಿಗಳು ಪಡೆದುಕೊಳ್ಳುತ್ತಾರೆ.



**ಬರಬಹುದು ನೂರಾರು ಆಮಿಷ, ಯೋಚಿಸಿ ಒಂದು ನಿಮಿಷ:** ಚುನಾವಣೆಯ ಸಂದರ್ಭದಲ್ಲಿ ಜನಪ್ರತಿನಿಧಿಗಳು, ಪಕ್ಷಗಳು ಹಾಗೂ ಅವರ ಬೆಂಬಲಿಗರಿಂದ ಹಲವು ಆಮಿಷಗಳು ಬರಬಹುದು. ಅದು ಹಣದ ರೂಪದಲ್ಲೋ, ದಿನನಿತ್ಯದ ವಸ್ತುಗಳು, ವಸ್ತ್ರಗಳು ಇತ್ಯಾದಿ ಯಾವುದನ್ನೇ ಹಂಚುವುದಿರಬಹುದು. ಮತದಾನವನ್ನು ನಮ್ಮ ರಾಷ್ಟ್ರೀಯ ಕರ್ತವ್ಯವೆಂದು ಅರಿತುಕೊಂಡು ಅದನ್ನು ನಾವು ನಿರ್ವಹಿಸಬೇಕೇ ವಿನಃ ಇಂತಹ ಆಮಿಷಗಳಿಗೆ ನಮ್ಮ ಮತವನ್ನು ಮಾರಿಕೊಳ್ಳಬಾರದು. ನಾವು ಈ ನಿಟ್ಟಿನಲ್ಲಿ ಜಾಗೃತರಾಗುವುದರ ಜೊತೆಗೆ, ಇತರರಲ್ಲೂ ಜಾಗೃತಿ ಮೂಡಿಸಬೇಕು.

## ಸಂಸ್ಮರಣೆ

# ಸತ್ಯಜಿತ್ ರೇ (2ನೇ ಮೇ, 1921 – 23ನೇ ಏಪ್ರಿಲ್, 1992)

ಭಾರತೀಯ ಚಿತ್ರರಂಗದ ಮೇರು ವ್ಯಕ್ತಿತ್ವ, ಖ್ಯಾತ ನಿರ್ದೇಶಕ ಸತ್ಯಜಿತ್ ರೇ. ಅವರು ಮೇ 2, 1921ರಂದು ಅವಿಭಜಿತ ಬಂಗಾಲದಲ್ಲಿ ಜನಿಸಿದರು. ಜಾಗತಿಕ ಸಿನಿಮಾ ಇತಿಹಾಸದಲ್ಲಿ ನಿರ್ದೇಶಕ ರೇ ಹೊಸ ಮೈಲಿಗಲ್ಲನ್ನೇ ನೆಟ್ಟವರು. ಸತ್ಯಜಿತ್ ರೇ ಅವರ ಸಿನಿಮಾ ಅವರ ಸಮಕಾಲೀನ ಸಮಾಜದ ಪ್ರತಿರೂಪವಾಗಿದ್ದವು. ಅನೇಕ ಹೊಸ ರೀತಿ ನೀತಿಗಳು, ತಂತ್ರಜ್ಞಾನವನ್ನು ಬೆಳ್ಳಿತೆರೆಗೆ ತಂದ ಕೀರ್ತಿ ರೇ ಅವರದ್ದಾಗಿದೆ.

ಸತ್ಯಜಿತ್ ರೇ ಅವರದ್ದು ಬರಹಗಾರ ಮತ್ತು ಕಲಾವಿದರ ಕುಟುಂಬ. ರೇ ಅವರ ತಂದೆ ಸುಕುಮಾರ್ ರೇ, ತಾಯಿ ಸುಪ್ರಭಾ ರೇ ಸಾಹಿತ್ಯಾಸಕ್ತರಾಗಿದ್ದರು. ಅವರು ಸಿನಿಮಾರಂಗಕ್ಕೆ ಪಾದಾರ್ಪಣೆ ಮಾಡುವ ಮುನ್ನ ಜಾಹೀರಾತು ಏಜೆನ್ಸಿಯಲ್ಲಿ, ಪುಸ್ತಕ ಪ್ರಕಾಶನದ ಅಂಗಡಿಯಲ್ಲಿ ಪುಸ್ತಕಗಳ ಡಿಸೈನಿಂಗ್ ಕೆಲಸ ಮಾಡಿಕೊಂಡಿದ್ದರು.

28 ವರ್ಷದ ಯುವಕ ಸತ್ಯಜಿತ್ ರೇ ಬದುಕು ಸಿನಿಮಾಕ್ಕೆ ತಿರುಗಿದ್ದು ಫ್ರೆಂಚ್ ನಿರ್ದೇಶಕ ಜೀನ್ ರೆನೊಯಿರ್ ಅವರು ಕೋಲ್ಕತಾಕ್ಕೆ ಭೇಟಿ ನೀಡಿದ್ದ ವೇಳೆ ಆಕಸ್ಮಿಕವಾಗಿ ಪರಿಚಯವಾದಾಗ. ಅದಾದ ಮೇಲೆ ಇಟಾಲಿಯನ್ ನಿಯೋ ರಿಯಲಿಸ್ಟ್ ಸಿನಿಮಾ "ಬೈಸಿಕಲ್ ಥೀವ್ಸ್" ಸಿನಿಮಾವನ್ನು ವೀಕ್ಷಿಸಿದ್ದರು. ಅದಕ್ಕಿಂತ ಮೊದಲೇ ರೇ ತಲೆಯೊಳಗೆ "ಪಥೇರ್ ಪಾಂಚಾಲಿ" ಕಥೆ ಹುಟ್ಟಿತ್ತು. 1948ರಲ್ಲಿ ಬೈಸಿಕಲ್ ಥೀವ್ಸ್ ತೆರೆಕಂಡಿತ್ತು.

ಕೊನೆಗೆ ರೇ 1955ರಲ್ಲಿ ಪಥೇರ್ ಪಾಂಚಾಲಿ ಎಂಬ ಸಿನಿಮಾವನ್ನು ನಿರ್ದೇಶಿಸುವ ಮೂಲಕ ಸಿನಿಮಾಲೋಕಕ್ಕೆ ಕಾಲಿಟ್ಟಿದ್ದರು. ಜತೆಗೆ ತಮ್ಮ ಮೊತ್ತ ಮೊದಲ ಸಿನಿಮಾದ ಮೂಲಕ ಸಂಪ್ರದಾಯದ ಕಟ್ಟುಪಾಡುಗಳನ್ನು ಬಿಟ್ಟು ಭಾರತೀಯ ಸಿನಿ ಪ್ರಪಂಚಕ್ಕೆ ಹೊಸ ಹಾದಿ ಹಾಕಿಕೊಟ್ಟಿದ್ದರು. 1956ರಲ್ಲಿ ಅಪಾರಾಜಿತೋ, 1958ರಲ್ಲಿ ಪರಾಶ್ ಪಥಾರ್, ಜಲ್ ಸಾಗರ್, 1959ರಲ್ಲಿ ಅಪೂರ್ವ ಸಾಗರ್, ದೇವಿ, ತೀನ್ ಕನ್ಯಾ, ದ ಪೋಸ್ಟ್ ಮಾಸ್ಟರ್ ಸೇರಿದಂತೆ 36 ಸಿನಿಮಾಗಳನ್ನು ನಿರ್ದೇಶಿಸಿದ್ದರು. ಪಥೇರ್ ಪಾಂಚಾಲಿ ಸಿನಿಮಾ ಬರೋಬ್ಬರಿ 11 ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿತ್ತು.

ಇಡಿಯ ಭಾರತೀಯ ಚಿತ್ರರಂಗ ಹಾಲಿವುಡ್ ಸಿನೆಮಾಗಳನ್ನು ಕಣ್ಣುಮುಚ್ಚಿ ಹಿಂಬಾಲಿಸುತ್ತಿದ್ದ ಸಮಯದಲ್ಲಿ ಹೊಸ ಹೊಸ ತಂತ್ರಜ್ಞಾನದ ಮೊರೆ ಹೋದವರು ರೇ. ಹೊರಾಂಗಣ ಚಿತ್ರೀಕರಣವೇ ಕಷ್ಟವೆನಿಸುತ್ತಿದ್ದ ಸಮಯದಲ್ಲಿ ಗ್ರಾಮಾಂತರ ಬಂಗಾಳದಲ್ಲಿ ಚಿತ್ರೀಕರಣ ನಡೆಸುವ ಧೈರ್ಯ ತೋರಿಸಿದ್ದಲ್ಲದೆ ಬಿಡಿ ಬಿಡಿಯಾಗಿ ಚಿತ್ರೀಕರಣ ಮಾಡುತ್ತಿದ್ದ ದೃಶ್ಯಗಳನ್ನು ಒಂದೇ ಬಾರಿಗೆ ಚಿತ್ರೀಕರಿಸುವ ಸಾಹಸವನ್ನು ಪ್ರದರ್ಶಿಸಿದರು. ಬೇರೆ ಕಲಾ ಪ್ರಾಕಾರಗಳಂತೆಯೇ ಸಿನಿಮಾಕ್ಕೂ ಕೂಡ ತನ್ನದೇ ಆದ ಭಾಷೆಯಿದೆಯೆಂದು ನಂಬಿದ್ದ



ರೇ ಅವರು ದೃಶ್ಯ ಮಾಧ್ಯಮವನ್ನು ಬಳಸಿಕೊಂಡು ಅಭಿವ್ಯಕ್ತಿಯ ಹೊಸ ಆಯಾಮಗಳನ್ನು ಆವಿಷ್ಕಾರ ಮಾಡುತ್ತಾ ಹೋದರು. ಕ್ಲೋಸ್ ಶಾಟ್ಸ್, ಲಾಂಗ್ ಶಾಟ್ಸ್, ಪ್ಯಾನ್ ಶಾಟ್ಸ್ ಹೀಗೆ ಅನೇಕ ರೀತಿಯ ಹೊಸತನವನ್ನು ಅಂದಿನ ಸೀಮಿತವಾದ ತಂತ್ರಜ್ಞಾನವನ್ನು ಬಳಸಿಕೊಂಡು ಚಿತ್ರೀಕರಿಸಿದ ಹೆಗ್ಗಳಿಕೆ ಅವರದ್ದು.

ಅದರಲ್ಲೂ ಸತ್ಯಜಿತ್ ರೇ ಅವರದ್ದು ದೃಶ್ಯಕಾವ್ಯದಂತೆ ಹರಿಯುವ ಸುಲಲಿತವಾದ ಶೈಲಿಯಲ್ಲಿನ ಚಿತ್ರೀಕರಣ ಜಾಗತಿಕ ಚಿತ್ರರಂಗವನ್ನೂ ನಿಬ್ಬೆರಗುಗೊಳಿಸಿತ್ತು. ಅತ್ಯಂತ ಚಾಣಾಕ್ಷತನದಿಂದ, ಸರಳವಾಗಿ ಮತ್ತು ಸುಂದರವಾಗಿ ಕಥಾವಸ್ತುಗಳನ್ನು ಕಟ್ಟಿಕೊಡುವ ಮತ್ತು ಅದನ್ನು ವಿಶೇಷವಾಗಿ ನಿರೂಪಿಸುವ ಅವರ ಪರಿ ನಿಜಕ್ಕೂ ಅನನ್ಯ. ರೂಪಕಗಳ ಮೂಲಕ ಕಥೆ ಹೇಳುವ ಸೃಜನಶೀಲವಾದ ಮುಖವನ್ನೂ ಸಿನಿಮಾದಲ್ಲಿ ಪರಿಚಯಿಸಿದ ಅವರು ಟೈಟಲ್ ಕಾರ್ಡುಗಳನ್ನು ತೋರಿಸುವಾಗ ಹೊಸತನವನ್ನು ಅಳವಡಿಸಿಕೊಂಡವರು. ಕ್ಯಾಮೆರಾದ ಹಿಂದೆ ಹೆಚ್ಚಿನ ಸಮಯ ಕಳೆಯುತ್ತಿದ್ದ ರೇ ಅವರಿಗೆ ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತದಲ್ಲಿಯೂ ಅಭಿರುಚಿಯಿತ್ತು.

ಹೀಗೆ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಸಿನಿಮಾದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದ ಸತ್ಯಜಿತ್ ರೇ ಅವರು 32 ಭಾರತೀಯ ರಾಷ್ಟ್ರೀಯ ಸಿನಿಮಾ ಪ್ರಶಸ್ತಿಗೆ ಭಾಜನರಾಗಿದ್ದರು. ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿಯೂ ಪ್ರಶಸ್ತಿಗಳನ್ನು ಪಡೆದಿದ್ದರು. 1992ರಲ್ಲಿ ಭಾರತ ಸರ್ಕಾರ ಸತ್ಯಜಿತ್ ರೇ ಅವರಿಗೆ ದೇಶದ ಪ್ರತಿಸ್ಠಿತ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತ್ತು. 1992ರ ಏಪ್ರಿಲ್ 23ರಂದು ರೇ ಇಹಲೋಕ ತ್ಯಜಿಸಿದರು.

## ಎಲ್ಲೋ ಕೇಳಿದ ಕಥೆ

ಒಂದು ದೊಡ್ಡ ಕಾಡಿನಲ್ಲಿ ಹಲವಾರು ಪ್ರಾಣಿಗಳು ನೆಲೆಸಿದ್ದವು. ಪ್ರಾಣಿಗಳು ಎಲ್ಲವೂ ಪರಸ್ಪರ ಸ್ನೇಹದಿಂದ ಕೂಡಿ ಜೀವನ ನಡೆಸುತ್ತಿತ್ತು. ಯಾವ ಪ್ರಾಣಿಯೂ ಯಾರೊಡನೆಯೂ ಜಗಳವಾಡುತ್ತಿರಲಿಲ್ಲ. ಅದೇ ಅರಣ್ಯದಲ್ಲಿ ಒಂದು ಸಿಂಹಿಣಿ ವಾಸವಾಗಿತ್ತು. ಅದು ಸದಾ ಅಹಂಕಾರದ ಪ್ರದರ್ಶನದೊಂದಿಗೆ, ಯಾವ ಪ್ರಾಣಿಯನ್ನೂ ಮಾತನಾಡಿಸದೆ ತಾನೇ ಶ್ರೇಷ್ಠ ಎಂಬ ಭಾವನೆಯಲ್ಲಿತ್ತು. ಯಾವುದಾದರೂ ಪ್ರಾಣಿ ಮಾತನಾಡಿಸಲು ಪ್ರಯತ್ನಿಸಿದರೆ ಕೋಪದಿಂದ ಹೆದರಿಸುತ್ತಿತ್ತು. ಸಿಂಹದ ಗುಂಪಿಗೆ ಸೇರಿದ ನಾನು ನಿಮ್ಮೊಂದಿಗೆ ಸ್ನೇಹ ಮಾಡಲು ಸಾಧ್ಯವಿಲ್ಲ. ಇಲ್ಲಿಂದ ನೀವೆಲ್ಲ ತೊಲಗಿ, ನನ್ನನ್ನು ಭೇಟಿ ಮಾಡಲು ಬರಬೇಡಿ ಎಂದು ಕೋಪದಿಂದ ಕೂಗಾಡಿ ಬೇರೆ ಪ್ರಾಣಿಗಳನ್ನು ದೂರವಿಡುತ್ತಿತ್ತು. ಈ ಎಲ್ಲ ಪ್ರಾಣಿಗಳು ಬೇಸರದಿಂದ ವಾಪಸ್ಸು ಹೋಗಿ ಮತ್ತೊಂದು ಈ ಸಿಂಹಿಣಿಯ ಹತ್ತಿರ ಹೋಗದೆ ಜೀವಿಸುತ್ತಿದ್ದವು.

ಒಂದು ದಿನ ಈ ಸಿಂಹಿಣಿ ಬೇಟೆಯಾಡಿ ವಾಪಸ್ಸು ಬರುವಾಗ ತನ್ನ ನಾಲ್ಕು ಮರಿಗಳು ಕಾಣಿಸುತ್ತಿರಲಿಲ್ಲ. ಸಂಜೆಯಾದರೂ ಈ ಮರಿಗಳು ವಾಸಸ್ಥಾನಕ್ಕೆ ಬರಲೇ ಇಲ್ಲ. ಈ ಸಿಂಹಿಣಿಗೆ ಆತಂಕ ಹೆಚ್ಚಾಗಿ ತನ್ನ ಶಕ್ತಿ ಎಲ್ಲವನ್ನು ಹಾಕಿ ಜೋರಾಗಿ ಗರ್ಜಿಸಿದರೂ ಸಹ ತನ್ನ ಮರಿಗಳ ಸೂಚನೆಯೇ ಸಿಕ್ಕಿಲ್ಲ. ಇದರಿಂದ ಬಹಳ ದುಃಖದಿಂದ ಈ ಸಿಂಹಿಣಿಯು ಅಳಲು ಪ್ರಾರಂಭಿಸಿತು.




ಮರದ ಮೇಲೆ ಕುಳಿತು ಕೊಂಡಿದ್ದ ಕೋತಿ ಇದನ್ನು ನೋಡುತ್ತಿತ್ತು. ಆ ಕೋತಿಯನ್ನು ಕಂಡು ಈ ಸಿಂಹಿಣಿಯು ದುಃಖದಿಂದ "ಹೇ ಕೋತಿಯೇ ನನ್ನ ಮರಿಗಳನ್ನು ನೀನು ಎಲ್ಲಾದರೂ ನೋಡಿದೆಯಾ? ದಯಮಾಡಿ ನನಗೆ ಹೇಳು ನನ್ನ ಮರಿಗಳನ್ನು ಬಿಟ್ಟು ನನಗೆ ಬದುಕುವುದು ಅಸಾಧ್ಯ" ಎಂದು ಅಳುತ್ತಾ ಬೇಡಿಕೊಳ್ಳುತ್ತಿತ್ತು.

ಈ ತುಂಟ ಕೋತಿಯೋ ಸಿಂಹಿಣಿಯುನ್ನು ಕಂಡು "ನಾನು ಒಂದು ಸಾಮಾನ್ಯ ಕೋತಿ. ಆದರೆ ನೀನು ಕಾಡಿನ ರಾಣಿ ನಮ್ಮಂತವರ ಬಳಿ ಹೀಗೆ ಕೇಳಿಕೊಳ್ಳುತ್ತಿದ್ದೀಯಾ. ಜಿಂಕೆ, ಕೋತಿ, ಬೆಕ್ಕು, ಮೊಲ ಇವುಗಳೆಲ್ಲ ಯಾವ ಲೆಕ್ಕಕ್ಕೆ ನಿನಗೆ. ಅಷ್ಟೇ ಯಾಕೆ ಹುಲಿ, ಚಿರತೆ, ಆನೆ ಮುಂತಾದ ದೊಡ್ಡ ಪ್ರಾಣಿಗಳೊಂದಿಗೆ ಸಹ ನೀನು ಮಾತನಾಡುವುದಿಲ್ಲ. ನೀನೇ ಹೋಗಿ ನಿನ್ನ ಮರಿಗಳನ್ನು ಹುಡುಕಿಕೊ. ನಮ್ಮ ಹತ್ತಿರ ಬರಬೇಡ". ಎಂದು ಹೇಳಿತು.

ಈ ಸಿಂಹಿಣಿಯು ತನ್ನ ಮರಿಗಳನ್ನು ಕಳೆದುಕೊಂಡ ದುಃಖದಲ್ಲಿ ಆ ಕೋತಿಗೆ "ನಿನ್ನನ್ನು ಕಾಲು ಹಿಡಿದು ಬೇಕಾದರೂ ಕೇಳಿಕೊಳ್ಳುತ್ತೇನೆ ದಯವಿಟ್ಟು ಹೀಗೆ ಮಾತನಾಡಬೇಡ. ಮುಂದಿನ ದಿನಗಳಲ್ಲಿ ನಾನು ಯಾವ ಪ್ರಾಣಿಯೊಂದಿಗೂ ಈ ರೀತಿ ವರ್ತಿಸದೆ ಸ್ನೇಹದಿಂದ ಜೊತೆಗೂಡಿ ವಾಸಿಸುತ್ತೇನೆ. ಇದು ನನ್ನ ಭಾಷೆ". ಎಂದು ಅಳತೊಡಗಿತು. ಇದನ್ನು ನೋಡಿದ ಬೇರೆಲ್ಲ ಪ್ರಾಣಿಗಳು ಅಲ್ಲಿಗೆ ಬಂದವು. ಅವೆಲ್ಲರೂ, "ಸಿಂಹಿಣಿಯೆ ನಿನಗೆ ಸಹಾಯ ಮಾಡಬಾರದೆಂದು ನಮಗೇನು ಇಲ್ಲ. ಆದರೆ ನೀನು ಈ ಕಾಡಿನಲ್ಲಿ ನಿನ್ನ ದರ್ಪವನ್ನು ಬಿಟ್ಟು ಎಲ್ಲರೊಂದಿಗೆ ಸ್ನೇಹಪೂರ್ವಕವಾಗಿ ಒಬ್ಬರಿಗೆ ಒಬ್ಬರು ಸಹಾಯವಾಗಿ ಸಹಕಾರದೊಂದಿಗೆ ವಾಸಿಸುತ್ತೇನೆ ಎಂದು ನಮಗೆ ಮತ್ತೊಮ್ಮೆ ದೃಢೀಕರಿಸು ಆಗ ನಾವು ನಿನ್ನ ಮರಿಗಳನ್ನು ಹುಡುಕಲು ಸಹಾಯ ಮಾಡುತ್ತೇವೆ" ಎಂದರು. "ಸರಿ ಹಾಗೆ ಆಗಲಿ ನನ್ನ ಹಳೆಯ ವರ್ತನೆಯನ್ನು ಬಿಟ್ಟು ನೀವೆಲ್ಲರೂ ಹೇಳಿದ ಹಾಗೆಯೇ ಇರುತ್ತೇನೆ" ಎಂದು ಸಿಂಹಿಣಿ ಹೇಳಿತು.

ಎಲ್ಲ ಪ್ರಾಣಿಗಳು ಸೇರಿ ಕಾಡು ಪೂರ್ತಿ ಹುಡುಕಿ, ಕಾಡಿನ ಆಚೆಗೆ ಹೋಗಿ ಅಲ್ಲಿ ಹತ್ತಿರವಿದ್ದ ಒಂದು ಮರುಭೂಮಿಯಲ್ಲಿ ಸಿಂಹದ ಮರಿಗಳನ್ನು ಕಂಡು ಅವುಗಳನ್ನು ಕರೆದುಕೊಂಡು ಬಂದು ಈ ಸಿಂಹಿಣಿಗೆ ಒಪ್ಪಿಸಿದರು. ಸಿಂಹಿಣಿಗೆ ಬಹಳ ಸಂತೋಷವಾಯಿತು. ಆ ಸಿಂಹಿಣಿಯು, ಪರಸ್ಪರ ಸ್ನೇಹದಿಂದ ಒಬ್ಬರಿಗೊಬ್ಬರು ಸಹಾಯವಾಗಿ ಬದುಕುವುದರ ಅರಿವು ಆಯಿತು.




## ಅಕ್ಕನ ದರ್ಶನ

ಪುಸ್ತಕ ಪರಿಚಯ

**ಲೇಖಕಿ** : ವೀಣಾ ಬನ್ನಂಜೆ
**ಬೆಲೆ** : 130/–
**ಪ್ರಕಾಶನ** : ರವೀಂದ್ರ ಪುಸ್ತಕಾಲಯ ಚಾಮರಾಜಪೇಟೆ, ಸಾಗರ– 577401

ಅಕ್ಕನ ಅಂತರಾತ್ಮದ ದರ್ಶನ ಮಾಡಿಸುವ ವೀಣಾ ಬನ್ನಂಜೆಯವರ ಕೃತಿ

ಆತ್ಮಸಾಕ್ಷಾತ್ಕಾರದ ಉತ್ತುಂಗದಲ್ಲಿದ್ದ ಅಕ್ಕ ಮಹಾದೇವಿಯ ಜೀವನ ವಿಭಿನ್ನ. "ಹರನೇ ನೀನೆನ್ನ ಗಂಡನಾಗಬೇಕೆಂದು ಅನಂತ ಕಾಲ ತಪಿಸಿದ್ದೆ ನೋಡಾ" ಎನ್ನುವ ಆಕೆಯ ಅಂತರಾಳ ವಿಶಾಲ. ಆಕೆಯ ಆಧ್ಯಾ ಭಾವ ಅರಿಯಬೇಕಾದರೆ ಒಳ ಹೊಳಹು ಮುಖ್ಯ. ಈ ವಿಶಾಲ ತತ್ವವನ್ನು ವೀಣಕ್ಕ 'ಅಕ್ಕನ ದರ್ಶನ' ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ. ಸದಾ ವಿಭಿನ್ನ ಬರಹ ಮತ್ತು ಚಿಂತನೆಗಳ ಮೂಲಕ ಹೆಸರಾದ ವೀಣಾ ಬನ್ನಂಜೆ ಪುಸ್ತಕದ ಪೂರ್ವಾರ್ಧದಲ್ಲಿ ಅಕ್ಕನ ಜೀವನ, ಆಕೆ ಭಗವಂತನನ್ನು ಭಾವಿಸಿದ ರೀತಿ, ಅವಳಿಗೂ ಪರರಿಗೂ ಇದ್ದ ತಾತ್ವಿಕ ಭಿನ್ನತೆ, ವಿಚಾರಗಳ ಸಾಮ್ಯತೆ ತಿಳಿಸುವ ಕೆಲಸ ಮಾಡಿದ್ದಾರೆ. Beingನ ಕುರಿತು ಸಾಕಷ್ಟು ಚಿಂತನೆ ನಡೆಸಿದ ಅವರು ಆಧ್ಯಾತ್ಮದಲ್ಲಿ ಸ್ತ್ರೀಯರು ನಡೆದ ಹಾದಿಯ ಕುರಿತಾದ ಮಂಥನವನ್ನೂ ಮಾಡಲೆತ್ನಿಸಿದ್ದಾರೆ. ಜಿಡ್ಡು ಕೃಷ್ಣಮೂರ್ತಿ, ಯುಜಿ ಕೃಷ್ಣಮೂರ್ತಿ, ಪುತ್ತೂರು ಅಜ್ಜ, ಮಹರ್ಷಿ ರಮಣರು, ಸತ್ಯಕಾಮರು, ಓಶೊ ರಜನೀಶರನ್ನೂ ಚರ್ಚೆಗೆ ಎಳೆದ ಲೇಖಕಿ ಅಕ್ಕನ ನಿಲುವನ್ನು ಸಮರ್ಥಿಸುವಲ್ಲಿ, ಸಾಕ್ಷಾತ್ಕಾರದ ಸತ್ಯ ತೆರೆದಿಡುವಲ್ಲಿ ಸಫಲರಾಗಿದ್ದಾರೆ.

ಇನ್ನು ಪುಸ್ತಕದ ಉತ್ತರಾರ್ಧದಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದಂತೆ ಅಕ್ಕನ ವಚನಗಳು ಹಾಗೂ ಅವುಗಳ ಒಳಾರ್ಥ ಏನೆಂಬುದನ್ನು ಪ್ರಚುರಪಡಿಸುವ ಮೆಚ್ಚುಗೆಯ ಕಾರ್ಯ ಮಾಡಿದ್ದಾರೆ. ಆಧ್ಯಾತ್ಮ ಸಾಧನೆಯ ಹಾದಿ, ಅಲ್ಲಿ ಉಂಟಾಗುವ ತಳಮಳ, ಅಲ್ಲಿಂದ ಸೃಷ್ಟಿಯಾಗುವ ಸಂದಿಗ್ಧತೆ, ಅದಕ್ಕೆ ಸಿಗುವ ಕಾವ್ಯ ರೂಪ, ಸಾಧನಾ ಔನ್ನತ್ಯ ತಲುಪಿದ ನಂತರ ನಿಲ್ಲುವ ಮಾತುಗಳು, ಹೀಗೆ ಹಂತ ಹಂತವಾದ ಸಾಧನೆ ಮತ್ತು ಆ ಹೊತ್ತಿಗಿನ ಭಾವನೆ ಬಗೆಗೆ ತೆರೆದಿಟ್ಟಿದ್ದಾರೆ. ಒಟ್ಟಾರೆ ಕನ್ನಡದ ಆಧ್ಯಾತ್ಮಿಕ ಪಿಪಾಸುಗಳಿಗೆ, ವಚನ ಸಾಹಿತ್ಯದ ಮೂಲ ಕೆದಕುವವರಿಗೆ ಹಾಗೂ ಹೊಸತನ್ನು ಹುಡುಕುವ ಅತ್ಯಂತ ಸಾಮಾನ್ಯ ಓದುಗರಿಗೂ ರುಚಿಸಬಲ್ಲ ಈ ಪುಸ್ತಕ ಮತ್ತೆ ಮತ್ತೆ ಓದುವ ಎಂಬ ಭಾವ ಮೂಡಿಸದಿರದು. ಇಂತಹ ಅಮೂಲ್ಯ ರತ್ನವೊಂದಕ್ಕೆ ಜನ್ಮವಿತ್ತ ಅಕ್ಕನ ತಂಗಿ ವೀಣಕ್ಕನಿಗೊಂದು ನಮನ.

**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ, ವಿನಯ್ ಕೃಷ್ಣ, ಕಿರಣ್‌ಕುಮಾರ್ ವಿವೇಕವಂಶಿ

# ಸಾಲುದ್ದದ ಸುದ್ದಿಗಳು

## ‘ಸಂಘಟನ್ ಸೆ ಸಮೃದ್ಧಿ’ ಅಭಿಯಾನಕ್ಕೆ ಚಾಲನೆ

ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರು ‘ಸಂಘಟನ್ ಸೇ ಸಮೃದ್ಧಿ’ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಅಭಿಯಾನವು ಎಲ್ಲಾ ಅರ್ಹ ಗ್ರಾಮೀಣ ಮಹಿಳೆಯರನ್ನು ಸ್ವಸಹಾಯ ಗುಂಪುಗಳ (SHGs) ಅಡಿ ತರುವ ಮೂಲಕ ದುರ್ಬಲ ವರ್ಗದ ಗ್ರಾಮೀಣ ಕುಟುಂಬಗಳನ್ನು ಸಬಲಗೊಳಿಸುತ್ತದೆ. 2014ರಲ್ಲಿ ಕೇವಲ 2.35 ಕೋಟಿ ಇದ್ದ ಸದಸ್ಯರ ಸಂಖ್ಯೆ ಈಗ 9 ಕೋಟಿ ದಾಟಿದೆ. ಆದರೆ 10 ಕೋಟಿ ಮಹಿಳೆಯರನ್ನು ಸ್ವಸಹಾಯ ಸಂಘಗಳ ವ್ಯಾಪ್ತಿಗೆ ತರುವ ಮತ್ತು ಸ್ವಸಹಾಯ ಸಂಘಗಳಿಗೆ ಸಂಬಂಧಿಸಿದ ಪ್ರತಿಯೊಬ್ಬ ಮಹಿಳೆಯು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಗಳಿಸಬೇಕು ಎಂಬ ಗುರಿಯನ್ನು ಸರ್ಕಾರ ಹೊಂದಿದೆ.


## ಹವಾಮಾನ ಬದಲಾವಣೆಯ ವಿರುದ್ಧ ಹೋರಾಟ ಮನೆಯಿಂದಲೇ ಆರಂಭವಾಗಬೇಕು: ಮೋದಿ

ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಅತ್ಯಂತ ಶಕ್ತಿಶಾಲಿ ಮಾರ್ಗವೆಂದರೆ ದೈನಂದಿನ ಅಭ್ಯಾಸದಲ್ಲಿ ಬದಲಾವಣೆ, ಇದು ಪ್ರತಿ ಮನೆಯಿಂದಲೂ ಪ್ರಾರಂಭವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ‘Making it Personal: How Behavioural Change Can Tackle Climate Change’ ಎಂಬ ವಿಶ್ವಬ್ಯಾಂಕ್‌ನ ಕಾರ್ಯಕ್ರಮದಲ್ಲಿ ನುಡಿದಿದ್ದಾರೆ. ವೀಡಿಯೋ ಸಂದೇಶದ ಮೂಲಕ ಮಾತನಾಡಿದ ಪ್ರಧಾನಿ ಮೋದಿ ಅವರು, ಶತಕೋಟಿ ಜನರು ಒಟ್ಟಾಗಿ ಶ್ರಮಿಸಿದಾಗ ಸಣ್ಣ ಕಾರ್ಯಗಳು ದೊಡ್ಡ ಪರಿಣಾಮವನ್ನು ಬೀರುತ್ತವೆ. ಹವಾಮಾನ ಬದಲಾವಣೆ ವಿರುದ್ಧ ಕಾನ್ಫರೆನ್ಸ್ ಟೇಬಲ್‌ಗಳು ಮಾತ್ರವಲ್ಲದೇ ಪ್ರತಿ ಮನೆಯ ಊಟದ ಮೇಜುಗಳಿಂದಲೂ ಹೋರಾಟ ಪ್ರಾರಂಭವಾಗಬೇಕೆಂದರು.

## 13 ಪ್ರಾದೇಶಿಕ ಭಾಷೆಗಳಲ್ಲಿ ಇನ್ಮುಂದೆ ಕಾನ್‌ಸ್ಟೆಬಲ್ (ಜಿಡಿ) ಸಿಎಪಿಎಫ್ ಪರೀಕ್ಷೆ : ಕೇಂದ್ರದ ಐತಿಹಾಸಿಕ ನಿರ್ಧಾರ

ಕಾನ್‌ಸ್ಟೆಬಲ್ (ಜಿಡಿ) ಸಿಎಪಿಎಫ್ ಪರೀಕ್ಷೆಗಳನ್ನು 13 ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವ ಐತಿಹಾಸಿಕ ನಿರ್ಧಾರವನ್ನು ಕೇಂದ್ರ ತೆಗೆದುಕೊಂಡಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಗೃಹ ಸಚಿವಾಲಯ, “ಐತಿಹಾಸಿಕ ಕ್ರಮದಲ್ಲಿ ಕಾನ್‌ಸ್ಟೆಬಲ್ (ಜಿಡಿ) ಸಿಎಪಿಎಫ್ ಪರೀಕ್ಷೆಗಳನ್ನು 13 ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ. ಇದು ಸ್ಥಳೀಯ ಯುವಕರ ಭಾಗವಹಿಸುವಿಕೆಗೆ ಉತ್ಸಾಹವನ್ನು ನೀಡುತ್ತದೆ. ಅಷ್ಟೇ ಅಲ್ಲದೇ ಈ ನಿರ್ಧಾರವು ಪ್ರಧಾನಿ ನರೇಂದ್ರ ಮೋದಿಯವರ ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಪ್ರೋತ್ಸಾಹಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ” ಎಂದಿದೆ.

## 2025ರ ವೇಳೆಗೆ 20% ಎಥೆನಾಲ್ ಮಿಶ್ರಿತ ಪೆಟ್ರೋಲ್ ಗುರಿ ತಲುಪಲಿದೆ ಭಾರತ




ಪ್ರಸ್ತುತ, 10% ಎಥೆನಾಲ್ ಅನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡಲಾಗುತ್ತಿದೆ ಮತ್ತು 2025 ರ ವೇಳೆಗೆ ಈ ಪ್ರಮಾಣವನ್ನು ದ್ವಿಗುಣಗೊಳಿಸಲು ಸರ್ಕಾರವು ಯೋಜಿಸುತ್ತಿದೆ. ಮುಂದಿನ ಹಣಕಾಸು ವರ್ಷದಲ್ಲಿ ಶೇಕಡಾ 20 ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಅನ್ನು ಪೂರೈಸಲು ಸಾಧ್ಯವಾಗುತ್ತದೆ ಎಂದು ತೈಲ ಸಚಿವ ಹರ್ದೀಪ್ ಸಿಂಗ್ ಪುರಿ ಖಚಿತಪಡಿಸಿದ್ದಾರೆ. 2030ರಲ್ಲಿ ಈ ಹಿಂದೆ ಯೋಜಿಸಲಾದ ಗುರಿಗಿಂತ ಐದು ವರ್ಷ ಮೊದಲೇ ಗುರಿ ಸಾಧಿಸುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. 20 ಪ್ರತಿಶತ ಎಥೆನಾಲ್‌ನೊಂದಿಗೆ ಬೆರೆಸಿದ ಪೆಟ್ರೋಲ್ ಅನ್ನು ಫೆಬ್ರವರಿಯಲ್ಲಿ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಯ್ದ ಪೆಟ್ರೋಲ್ ಪಂಪ್‌ಗಳಲ್ಲಿ ಹೊರಸೂಸುವಿಕೆಯನ್ನು ಕಡಿತಗೊಳಿಸಲು ಜೈವಿಕ ಇಂಧನಗಳ ಬಳಕೆಯನ್ನು ಹೆಚ್ಚಿಸುವ ಕಾರ್ಯಕ್ರಮದ ಭಾಗವಾಗಿ ಪರಿಚಯಿಸಲಾಗಿದೆ.


## ಸ್ಟಾರ್ಟ್‌ಅಪ್‌ಗಳ ಗುರುತಿಸುವಿಕೆಗೆ ‘ಯುವ ಪೋರ್ಟಲ್’

‘ಯುವ ಪೋರ್ಟಲ್’ ಸಂಭಾವ್ಯ ಯುವ ಸ್ಟಾರ್ಟ್‌ಅಪ್‌ಗಳನ್ನು ಸಂಪರ್ಕಿಸಲು ಮತ್ತು ಗುರುತಿಸಲು ಸಹಾಯ ಮಾಡುತ್ತದೆ. ವಿಶೇಷವಾಗಿ ಉದ್ಯಮದಲ್ಲಿ ಮಧ್ಯಸ್ಥಗಾರರ ಭಾಗವಹಿಸುವಿಕೆಯು ವಿಶಾಲವಾಗಿರದಿದ್ದರೆ, ಸರಿಯಾದ ಉದ್ಯಮದ ಮ್ಯಾಪಿಂಗ್ ಮತ್ತು ಸರಿಯಾದ ಯೋಗ್ಯತೆಯ ಕೊರತೆಯಿಂದಾಗಿ ಸ್ಟಾರ್ಟ್‌ಅಪ್‌ಗಳು ಸಮರ್ಥನೀಯವಾಗಿ ಉಳಿಯುವುದಿಲ್ಲ. ಈ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಾಗಿ ಯುವ ಪೋರ್ಟಲ್ ಸಹಕಾರಿಯಾಗಿದೆ.

## ಬಿತ್ತನೆ ಬೀಜಕ್ಕೂ ಕ್ಯೂಆರ್ ಕೋಡ್

ನಕಲಿ ಪ್ಯಾಕೆಟ್ ಹಾವಳಿ ತಡೆಯಲು ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಿಂದಲೇ ಬಿತ್ತನೆ ಬೀಜಗಳ ಮೇಲೆ ಕ್ಯೂಆರ್ ಕೋಡ್ ಕಡ್ಡಾಯಗೊಳಿಸಲು ಕೇಂದ್ರದಂತೆ ರಾಜ್ಯ ಸರ್ಕಾರವೂ ಮುಂದಾಗಿದೆ. ಇದರಿಂದ ರೈತರಿಗೆ ಪ್ರಮಾಣೀಕೃತ ಬಿತ್ತನೆ ಬೀಜವನ್ನು ಪೂರೈಸುವ ಜೊತೆಗೆ ಅಕ್ರಮ ದಾಸ್ತಾನು ತಡೆಯುವ ಉದ್ದೇಶವೂ ಇದೆ.

## ಚುನಾವಣಾ ಅಕ್ರಮದ ವಿರುದ್ಧ ನೀವೂ ದೂರು ನೀಡಬಹುದು




ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇಸ್ಟೋರ್ ಮೂಲಕ ಸಿ–ವಿಜಿಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಚುನಾವಣಾ ಅಕ್ರಮಗಳ ಬಗ್ಗೆ ಆಯೋಗಕ್ಕೆ ನೇರವಾಗಿ ಮಾಹಿತಿ ನೀಡಬಹುದು. ಒಟ್ಟು 16 ಬಗೆಯ ಅಕ್ರಮಗಳ ಪೈಕಿ ಒಂದನ್ನು ಆಯ್ಕೆ ಮಾಡಿ, ಅಕ್ರಮಕ್ಕೆ ಸಂಬಂಧಪಟ್ಟ ಫೋಟೊ ಅಥವಾ ವಿಡಿಯೊ ಸಮೇತ ಅಪ್‌ಲೋಡ್ ಮಾಡಬಹುದು. ದೂರುದಾರರು ತಮ್ಮ ಸ್ವವಿವರ ನೀಡಿ ಅಥವಾ ಅನಾಮಧೇಯವಾಗಿ ದೂರು ಸಲ್ಲಿಸಬಹುದು. ಆಯೋಗವು ದೂರುದಾರರ ಹೆಸರು, ವಿಳಾಸ ಸೇರಿದಂತೆ ವೈಯಕ್ತಿಕ ವಿವರವನ್ನು ಗೌಪ್ಯವಾಗಿ ಇಡಲಿದೆ. ಸಿ–ವಿಜಿಲ್ ಆ್ಯಪ್ ಮಾತ್ರವಲ್ಲದೇ ಸಹಾಯವಾಣಿ 1950ಕ್ಕೆ ಕರೆಮಾಡಿ ದೂರು ಕೊಡಬಹುದು.

# ಮಗಳ ಆರೋಗ್ಯ ಪೋಷಿಸುವ ಕಾಳಜಿ ‘ಸೀಡ್ ಬ್ಯಾಸ್ಕೇಟ್’ ಸಂಸ್ಥೆಯ ಸ್ಥಾಪನೆಗೆ ಮುನ್ನುಡಿ ಬರೆಯಿತು!

ಪ್ರೇರಣಾ

ತೆಲಂಗಾಣದ ಖಮ್ಮನ್ ಜಿಲ್ಲೆಯ ರೈತ ಕುಟುಂಬದಲ್ಲಿ ಜನಿಸಿದ ಚಂದನಾ ಗಾಡೆಯವರು 2014ರಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡುತ್ತಾರೆ. ತಾನು ಮನೆಯಲ್ಲಿ ಬೆಳೆದ ಪೌಷ್ಟಿಕಾಂಶಯುಕ್ತ ತರಕಾರಿಗಳನ್ನು ತಿಂದು ಬೆಳೆದಿದ್ದರಿಂದ ತನ್ನ ಮಗಳಿಗೂ ಅಂತಹದೇ ಸಾವಯವ ತರಕಾರಿಗಳನ್ನು ತಿನ್ನಿಸಿ ಬೆಳೆಸಲು ಬಯಸಿದ್ದರು. ಆದರೆ ನಗರದ ಮಾರುಕಟ್ಟೆಯಲ್ಲಿ ಸಿಗುವ ತರಕಾರಿಗಳನ್ನು ಬೆಳೆಯಲು ಕಲುಷಿತ ಒಳಚರಂಡಿ ನೀರನ್ನು ಬಳಸುತ್ತಾರೆ ಮತ್ತು ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳನ್ನು ಬಳಸುತ್ತಾರೆ ಎಂಬ ಸುದ್ದಿ ಅವರಿಗೆ ತಿಳಿದಿತ್ತು. ಇತ್ತೀಚಿನ ದಿನಗಳಲ್ಲಿ ತಿನ್ನುವ ಆಹಾರದ ಕಾರಣದಿಂದ ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಹಲವಾರು ರೋಗಗಳಿಗೆ ತುತ್ತಾಗುವುದರ ಕುರಿತು ತಿಳಿದುಕೊಂಡಿದ್ದರು.

ತಮ್ಮ ಮಗಳ ಆರೋಗ್ಯಯುತ ನಾಳೆಗಳಿಗಾಗಿ ಮನೆಯಲ್ಲಿಯೇ ಆಹಾರ ಪದಾರ್ಥಗಳನ್ನು ಬೆಳೆಸಲು ಸ್ಥಳೀಯ ಬೀಜಗಳನ್ನು ಹುಡುಕಲು ಪ್ರಾರಂಭಿಸಿದರು. ಚಂದನಾ ಮತ್ತು ಅವರ ಪತಿ ನವೀನ್ ಗಾಡೆ ಹಲವಾರು ಸ್ಥಳೀಯ ಮತ್ತು ಆನ್‌ಲೈನ್ ಮಾರುಕಟ್ಟೆಗಳಲ್ಲಿ ವಿಚಾರಿಸಿದರು. ಆಗ ಸ್ಥಳೀಯ ಬೀಜಗಳಿಗೆ ಸಮರ್ಥ ಮಾರುಕಟ್ಟೆಯ ಕೊರತೆಯಿದೆ ಎಂದು ಕಂಡುಕೊಂಡರು. ಹಾಗೆಯೇ ಅವರಿಗೆ ದೊರೆತ ಹೈಬ್ರಿಡ್ ಬೀಜಗಳು ಆರೋಗ್ಯಕ್ಕೆ ಒಳ್ಳೆಯದಲ್ಲ ಮತ್ತು ಇ–ಕಾಮರ್ಸ್ ವೆಬ್‌ಸೈಟ್‌ಗಳಲ್ಲಿ ಸಿಗುತ್ತಿದ್ದ ಸ್ಥಳೀಯ ಬೀಜಗಳ ಗುಣಮಟ್ಟ ಉತ್ತಮವಾಗಿರಲಿಲ್ಲ ಎನ್ನುವುದನ್ನು ಮನಗಂಡರು.

ಚಂದನಾ ಅವರು ಈ ಕ್ಷೇತ್ರದಲ್ಲಿ ವ್ಯಾಪಾರ ಅವಕಾಶವನ್ನು ಕಂಡು ಮತ್ತು ನೈಸರ್ಗಿಕ ಧಾನ್ಯಗಳು ಸುಲಭವಾಗಿ ಸಿಗುವಂತೆ ಮಾಡಲು ತನ್ನ ಗಂಡನ ಸಹಕಾರದೊಂದಿಗೆ ‘ಸೀಡ್‌ಬಾಸ್ಕೆಟ್ ಕೃಷಿ ಸೇವೆಗಳು’ ಎಂಬ ಸಂಸ್ಥೆಯನ್ನು 2016 ರಲ್ಲಿ ಪ್ರಾರಂಭಿಸಿದರು. ಪ್ರಸ್ತುತ ಭಾರತದ ಪ್ರಮುಖ ಇ–ಕಾಮರ್ಸ್ ಮಾರುಕಟ್ಟೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಇಂದು ಈ ಸ್ಟಾರ್ಟ್‌ಅಪ್ ಸ್ಥಳೀಯ ಬೀಜಗಳು, ತರಕಾರಿಗಳು, ಹಣ್ಣುಗಳು, ಹೂವುಗಳು, ಗ್ರೋ ಬ್ಯಾಗ್‌ಗಳು ಸೇರಿದಂತೆ ಮನೆ ತೋಟಗಾರಿಕೆಗೆ ಸಹಾಯಕವಾದ ಸುಮಾರು 200 ಉತ್ಪನ್ನಗಳನ್ನು ಒದಗಿಸುತ್ತಿದೆ. ತಮ್ಮ ಸ್ಟಾಟ್‌ಅಪ್‌ನ ಮೂಲಕ ಅವರು





ಕನಿಷ್ಠ 150 ಸ್ಥಳೀಯ ಬೀಜಗಳು, ಹಣ್ಣುಗಳು ಮತ್ತು ತರಕಾರಿಗಳನ್ನು ಮಾರಾಟ ಮಾಡುತ್ತಿದ್ದಾರೆ.

### ನಗರ ಜೀವನದಲ್ಲಿ ಹಳ್ಳಿ ಮಾದರಿಯನ್ನು ಪರಿಚಯಿಸುವ ಪ್ರಯತ್ನ

ಈ ದಂಪತಿಗಳು ತಮ್ಮ ಊರಿನ ರೈತರಿಂದ ಸ್ಥಳೀಯ ಬೀಜದ ತಳಿಗಳನ್ನು ಪಡೆಯಲು ಪ್ರಾರಂಭಿಸಿದರು ಮತ್ತು ತಮ್ಮ 10x4 ಚದರ ಅಡಿ ಬಾಲ್ಕನಿಯಲ್ಲಿ ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಿದರು. “ಹಳ್ಳಿಗಳಲ್ಲಿ ಬೆಳೆದವರಾದ್ದರಿಂದ ನಮಗೆ ನಮ್ಮ ಬಳಕೆಗಾಗಿ ತರಕಾರಿಗಳನ್ನು ಖರೀದಿಸಿದ ನೆನಪಿಲ್ಲ. ನಾವು ನಮ್ಮ ಹಿತ್ತಲಲ್ಲಿ ಬೆಳೆದಿದ್ದನ್ನು ತಿಂದಿದ್ದೇವೆ. ಇಂದು, ನಮ್ಮ ಮಗಳಿಗೆ ಅದೇ ರೀತಿಯ ವಾತಾವರಣವನ್ನು ಒದಗಿಸಲು ಸಮರ್ಥರಾಗಿದ್ದೇವೆ. ನಮ್ಮ ಪ್ರಯತ್ನದ ಫಲವಾಗಿ ಈಗ ನಾವು ನಮ್ಮ ಬಳಕೆಗಾಗಿ ಮಾರುಕಟ್ಟೆಯಿಂದ ತರಕಾರಿಗಳನ್ನು ಖರೀದಿಸುವುದಿಲ್ಲ” ಎಂದು ಎಂಸಿಎ ಪದವೀಧರೆ ಚಂದನಾ ಹೇಳುತ್ತಾರೆ.

ವಿಶ್ವಾಸಾರ್ಹ ಪೂರೈಕೆದಾರರು ಮತ್ತು ರೈತರಿಂದ ಉತ್ತಮ ಗುಣಮಟ್ಟದ ಸ್ಥಳೀಯ ಬೀಜಗಳನ್ನು ಪಡೆಯುವುದು ಚಂದನಾರಿಗೆ ಸವಾಲುಗಳಲ್ಲೊಂದಾಗಿತ್ತು. ಆದ್ದರಿಂದ, ಅವರು ತಮ್ಮ ಜಿಲ್ಲೆಗೆ ಹಿಂದಿರುಗಿ, ಬೀಜಗಳನ್ನು ಸಂಗ್ರಹಿಸಲು ಕೆಲವು ರೈತರೊಂದಿಗೆ ಒಪ್ಪಂದ ಮಾಡಿಕೊಂಡರು. ಅವರಲ್ಲಿ ಒಬ್ಬರು ಬಾಬು ರಾವ್. ಅವರು ಕಳೆದ ನಾಲ್ಕು ವರ್ಷಗಳಿಂದ ಹಲವು ಸ್ಥಳೀಯ ಬೀಜಗಳನ್ನು ಪೂರೈಸುತ್ತಿದ್ದಾರೆ. ಬೀಜಗಳನ್ನು ಪೂರೈಸುವುದು ಬಾಬು ಅವರಿಗೂ ಸಮಾನವಾಗಿ ಪ್ರಯೋಜನಕಾರಿಯಾಗಿದೆ. ಈಗ ಪ್ರತಿ ಮೂರು ತಿಂಗಳಿಗೊಮ್ಮೆ 50,000 ರೂಪಾಯಿಗಳವರೆಗೆ ಹೆಚ್ಚುವರಿ ಆದಾಯವನ್ನು ಗಳಿಸುಲು ಶಕ್ತನಾಗಿದ್ದೇನೆ ಎಂದು ಬಾಬು ಅವರೇ ಸ್ವತಃ ಹೇಳಿಕೊಳ್ಳುತ್ತಾರೆ. ಅಷ್ಟೇಯಲ್ಲದೇ ಚಂದನಾ ನಗರದಲ್ಲಿನ ತಮ್ಮ ಸ್ವಂತ ಕೃಷಿಭೂಮಿಯಿಂದ ಮತ್ತು ಭಾರತದ ವಿವಿಧ ಭಾಗಗಳ ಇತರ ವಿಶ್ವಾಸಾರ್ಹ ಮಾರಾಟಗಾರರಿಂದ ನೈಸರ್ಗಿಕ ಬೀಜಗಳನ್ನು ಪಡೆಯುತ್ತಾರೆ.

### ಬಾಲ್ಕನಿಯಲ್ಲಿ ವ್ಯವಸಾಯ ಮತ್ತು ಕೋಣೆಯಲ್ಲಿ ವ್ಯಾಪಾರ!

ಉದ್ಯಮವನ್ನು ಪ್ರಾರಂಭಿಸುವ ಮೊದಲು, ಚಂದನಾ ಆರು ತಿಂಗಳ ಕಾಲ ಹೈದರಾಬಾದ್‌ನಲ್ಲಿ ಸಂಶೋಧನೆ ಮತ್ತು ಮನೆ ತೋಟಗಾರಿಕೆಗೆ ತರಗತಿಗಳಿಗೆ ಹಾಜರಾಗಿ ಅನೇಕ ಕೃಷಿ ಸಂಬಂಧಿತ ಸಂಗತಿಗಳನ್ನು ಕಲಿತರು.

ತಾವು ಪಡೆದ ಜ್ಞಾನವನ್ನು ಇತರ ನಗರವಾಸಿ ತೋಟಗಾರರಿಗೆ ತಿಳಿಸಲು ಬಯಸಿದ್ದರು, ಮತ್ತು ಈ ಕಾರಣಕ್ಕಾಗಿ ಅವರು ತಮ್ಮ ವೆಬ್‌ಸೈಟ್‌ನಿಂದ ಖರೀದಿಸಿದ ಪ್ರತಿಯೊಂದು ಬೀಜ ವೈವಿಧ್ಯಕ್ಕೂ ಸೂಚನಾ ಕೈಪಿಡಿಯನ್ನು ಒದಗಿಸುತ್ತಾರೆ ಎಂದು ಅವರು ಹೇಳುತ್ತಾರೆ. ಈ ಕೈಪಿಡಿಯು ಪ್ರತಿ ಬೆಳೆಗೆ ಮಣ್ಣಿನ ಅವಶ್ಯಕತೆಗಳು, ಅದರ ಬಿತ್ತನೆಯ ಅವಧಿ, ಕಂಟೇನರ್ ವಿವರಣೆ, ಕೊಯ್ಲು ಅವಧಿ, ಕೀಟ ನಿವಾರಕಗಳು ಮತ್ತು ಬಳಸಬೇಕಾದ ಕಾಂಪೋಸ್ಟ್‌ನ ಮೂಲಭೂತ ವಿವರಗಳನ್ನು ಒಳಗೊಂಡಿರುತ್ತದೆ.

ಸಂಶೋಧನೆಯ ನಂತರ, ಚಂದನಾ ತನ್ನ ಸಣ್ಣ ಬಾಲ್ಕನಿಯಲ್ಲಿ ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಿದರು. ಆದರೆ ತನ್ನ 2BHK ಬಾಡಿಗೆ ಕೊಠಡಿಗಳಲ್ಲಿ ಒಂದನ್ನು ತನ್ನ ವ್ಯಾಪಾರವನ್ನು ಬೆಳೆಸಲು ಮೀಸಲಿಟ್ಟಳು. ಆರಂಭದಲ್ಲಿ, ದಂಪತಿಗಳು ತಿಂಗಳಿಗೆ ಎರಡು ಆರ್ಡರ್‌ಗಳೊಂದಿಗೆ ಪ್ರಾರಂಭಿಸಿದರು, ಆದರೆ ಈಗ ಅವರು ಮಾಸಿಕ 1,000ಕ್ಕೂ ಹೆಚ್ಚು ಆರ್ಡರ್‌ಗಳನ್ನು ಪಡೆಯುತ್ತಾರೆ ಮತ್ತು ದೇಶಾದ್ಯಂತ 25,000 ಕ್ಕೂ ಹೆಚ್ಚು ಗ್ರಾಹಕರನ್ನು ಪೂರೈಸುತ್ತಾರೆ. ಅವರ ಗರಿಷ್ಠ ಗ್ರಾಹಕರು ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು ಮತ್ತು ರಾಜಸ್ಥಾನ ರಾಜ್ಯಗಳಿಂದ ಬಂದವರು.

ತಮ್ಮ ಅಪಾರ್ಟ್‌ಮೆಂಟ್‌ನ ಒಂದು ಕೊಠಡಿಯಿಂದ 1 ಲಕ್ಷ ರೂಪಾಯಿ ಹೂಡಿಕೆಯೊಂದಿಗೆ ಪ್ರಾರಂಭವಾದ ಈ ಸ್ಟಾರ್ಟ್‌ಅಪ್ ಇಂದು ವಾರ್ಷಿಕ 50 ಲಕ್ಷ ರೂಪಾಯಿಗಳವರೆಗೆ ವಹಿವಾಟು ನಡೆಸುತ್ತಿದೆ ಎಂದು ಚಂದನಾ ಹೇಳುತ್ತಾರೆ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th APRIL 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-05-2023



## ಇಂದು ಅಂಬೇಡ್ಕರ್ ಕನಸಿನ ಭಾರತ ಸಾಕಾರಗೊಳ್ಳುತ್ತಿದೆ: ರಘುನಂದನ




"ನಾವೆಲ್ಲರೂ ದೇವರ ಮಕ್ಕಳು ಎನ್ನುವುದು ಪ್ರಜಾಪ್ರಭುತ್ವಕ್ಕೆ ಸರಿಯಾದ ಆಧಾರವಲ್ಲ. ಪ್ರತಿಯೊಬ್ಬರೂ ಅನಂತ ಚೈತನ್ಯದ ಭಾಗವಾದಾಗ ಮಾತ್ರ ಅದು ಪ್ರಜಾಪ್ರಭುತ್ವವಾಗಿ ವ್ಯಕ್ತವಾಗುತ್ತದೆ ಎನ್ನುವುದನ್ನು ತಿಳಿಸಿದ ಅಂಬೇಡ್ಕರ್, ಉಪನಿಷತ್ತಿನ ಯಾವುದೇ ಋಷಿಗೂ ಕಡಿಮೆಯಿಲ್ಲ. ಭಾರತೀಯ ಚಿಂತನೆಯನ್ನು ಮೈಗೂಡಿಸಿಕೊಂಡವರು ಅಂಬೇಡ್ಕರರು" ಎಂದು ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಸಹಸಂಯೋಜಕ ರಘುನಂದನ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು ಮಹಾನಗರದ ವತಿಯಿಂದ ಮಲ್ಲೇಶ್ವರದ ಅಖಿಲ ಹವ್ಯಕ ಮಹಾಸಭಾದಲ್ಲಿ ಆಯೋಜಿಸಲಾದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ನಾವು ಅಂಬೇಡ್ಕರ್ ಅವರನ್ನು ಸಂವಿಧಾನದ ಆಶಯಗಳ ಶಿಲ್ಪಿ ಎಂದು ಕರೆಯುತ್ತೇವೆ. ಆದರೆ ಸಮಾಜವಾದ ಮತ್ತು ಪ್ರಜಾಪ್ರಭುತ್ವ ಒಟ್ಟಿಗೆ ಹೋಗಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಅವರೇ ಹೇಳಿದ್ದರೂ ಸಮಾಜವಾದ ನಮ್ಮ ಸಂವಿಧಾನದ ಪೀಠಿಕೆಯಲ್ಲೇ ಇದೆ. ಇದೊಂದು ವಿಚಿತ್ರ. ಅಂಬೇಡ್ಕರ್ ಅವರ ಉದ್ದೇಶಗಳನ್ನು ವಿರೋಧಿಸಿದವರು, ಅವರ ಹೆಸರನ್ನೇ ಇಟ್ಟುಕೊಂಡು ಎಡವಟ್ಟುಗಳನ್ನು ಮಾಡಿದ್ದಾರೆ. ಅವರ ಕುರಿತು ಎಚ್ಚರವಹಿಸದಿದ್ದರೆ ಅವರ ಆಖ್ಯಾನ(ನರೇಟಿವ್)ದ ಅಂಬೇಡ್ಕರರ ಮೂಲಕ ಅತ್ಯಂತ ಭಾರತೀಯ ಅಧ್ಯಾತ್ಮಿಕ ಸೆಲೆಯಲ್ಲಿ ಬೆಳೆದಂತಹ ಅಂಬೇಡ್ಕರರನ್ನು ತಪ್ಪು ತಿಳಿದುಕೊಳ್ಳುವ ಸಂಭವವಿದೆ" ಎಂದು ನುಡಿದರು.

"ಧರ್ಮದ ಹೆಸರಿನಲ್ಲಿ ನಡೆಯುವ ವಂಚನೆ ತಪ್ಪು. ಆದರೆ ಧರ್ಮವೇ ತಪ್ಪಲ್ಲ ಎಂದು ಅಂಬೇಡ್ಕರ್ ನುಡಿದಿದ್ದರು. ಅವರದ್ದೇ ನೆಲೆಯಲ್ಲಿ ನಾವು ನಿಂತು ನೋಡಿದಾಗ ಮಾತ್ರ ಅವರ ನೋವು ನಮಗೆ ಅರ್ಥವಾಗುತ್ತದೆ. ಅವರ ನೆಲೆಯನ್ನು ನಾವು ಅರ್ಥೈಸಿಕೊಳ್ಳಬೇಕಾದರೆ ಅವರಿಗಾದ ನೋವನ್ನು ಅನುಭವಿಸಬೇಕು. ಆತ್ಮ ಪರಮಾತ್ಮನ ಕುರಿತು ದೊಡ್ಡ ಅರ್ಥದಲ್ಲಿ ಚರ್ಚೆಯನ್ನು ಮಾಡಿದ ಹಿಂದೂ ಸಮಾಜ ನೆರಳು ಬಿದ್ರೆ ನಾನು ಹಾಳಾದೆ, ನಾಯಿ ನೀರು ಕುಡಿದರೆ ಪರವಾಗಿಲ್ಲ, ಆದರೆ ಮನುಷ್ಯ ನೀರು ಮುಟ್ಟಬಾರದು ಎಂಬ ಸ್ಥಿತಿಗೆ ಬಂತು. ಯಾವ ಸಮಾಜ ಧರ್ಮವೆಂದು ಉಪನಿಷತ್ತುಗಳ ಅಧ್ಯಾತ್ಮಗಳನ್ನು ಹೇಳಿತ್ತೋ, ಅದೇ ಸಮಾಜ ಅವೆಲ್ಲವನ್ನೂ ಸುಮ್ಮನೇ ಪಕ್ಕಕ್ಕಿಟ್ಟು ಅಧರ್ಮದ ಕೆಲಸವನ್ನು ಮಾಡುತ್ತಿತ್ತು. ಇಂತಹ ಪರಿಸ್ಥಿತಿಗಳಲ್ಲಿ ಧ್ವನಿ ಎತ್ತಿದ ಬಸವಣ್ಣನವರು, ಪುರಂದರದಾಸರು, ಕನಕದಾಸರು ಮುಂತಾದವರಂತೆಯೇ ಕೆಲಸ ಮಾಡಿದವರು ಅಂಬೇಡ್ಕರ್. ಆದರೆ ಬಸವಣ್ಣನವರನ್ನು ಭಕ್ತಿಭಂಡಾರಿ ಎಂದು ಕರೆದೆವು. ಅಂಬೇಡ್ಕರ್ ಅವರನ್ನು ಬಂಡಾಯಗಾರರೆಂದು ಕರೆದೆವು. ಆದ್ದರಿಂದ ಅಂಬೇಡ್ಕರ್ ಅವರನ್ನು ಸರಿಯಾದ ದೃಷ್ಟಿಯಲ್ಲಿ ನೋಡುವುದನ್ನು ಕಲಿಯದೇ ಹೋದರೆ ಈ ದೇಶದಲ್ಲಿ ಬಹಳ ಕಠಿಣ ಪರಿಸ್ಥಿತಿಯನ್ನು ಕಾಣುತ್ತೇವೆ" ಎಂದು ಅಭಿಪ್ರಾಯಪಟ್ಟರು.

"ಇಂದು ಜೈಭೀಮ್-ಜೈಮೀಮ್ ಎಂದು ಹೇಳುವ ಸಮಾನ ಸಮಸ್ಯೆಗಳಿರುವ ವರ್ಗ ಇದೆ. ಹೈದರಬಾದಿನ ವಿಮೋಚನೆಯ ಸಂದರ್ಭದಲ್ಲಿ ನಡೆದಿದ್ದೂ ಜೈಭೀಮ್-ಜೈಮೀಮ್. ಅಂತಹ ಸಂದರ್ಭದಲ್ಲಿ ಅಂಬೇಡ್ಕರ್ ಅವರು ನಮಗೆ ಹಿಂದೂಗಳಿಂದ ತೊಂದರೆಯಾಗಿದೆ ಮತ್ತು ಸಿಟ್ಟಿದೆ. ಆದರೆ ಅದೊಂದೇ ಕಾರಣದಿಂದ ನಾವು ದೇಶ ವಿರೋಧಿಗಳಾಗದೆ, ನಿಜಾಮನ ಪರವಾಗಿ ಇಸ್ಲಾಮೀ ರಾಜ್ಯವನ್ನು ಮಾಡಬೇಕೆಂದಿರುವ ರಜಾಕಾರರಿಗೆ ಬೆಂಬಲ ನೀಡಬಾರದು. ನಾವೆಲ್ಲಾ ಕೂಡಿ ರಜಾಕರ ವಿರುದ್ಧ ಹೋರಾಟ ಮಾಡೋಣ. ನಂತರ ನಮ್ಮೊಳಗಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ ಎಂದಿದ್ದರು" ಎನ್ನುವುದನ್ನು ತಿಳಿಸಿದರು.

"ಅಂದು ಅಂಬೇಡ್ಕರ್ ಕಂಡಿದ್ದ ಕನಸು ಇಂದು ಒಂದೊಂದೇ ನೆರವೇರುವ ಸನ್ನಿವೇಶಗಳು ನಡೆಯುತ್ತಿವೆ. ವಿಧಿ 370ನ್ನು ನಾನು ಒಪ್ಪುವುದಿಲ್ಲ ಎಂದು ಅಂಬೇಡ್ಕರ್ ಹೇಳಿದ್ದರು. ಆದರೂ ಸಂವಿಧಾನದಲ್ಲಿ ಅದನ್ನು ಸೇರಿಸಲಾಯಿತು. ಅಂದು ಸಂವಿಧಾನದೊಳಗೆ ಸೇರಿದ್ದ ವಿಧಿ 370 ಇಂದಿಲ್ಲ. ಅಂಬೇಡ್ಕರ್ ಹಿಂದೂ ಕೋಡ್ ಬಿಲ್ ವಿಚಾರಕ್ಕಾಗಿ ರಾಜೀನಾಮೆ ನೀಡಿದರು. ಒಂದು ಖಂಡ-ತುಂಡವಾಗಿದ್ದ ರಾಷ್ಟ್ರವನ್ನು ಕೂಡಿಸದೇ ಹೋದರೆ ಭಾರತವನ್ನು ಕಟ್ಟುವುದು ಹೇಗೇ? ಎಂದು ಪ್ರಶ್ನಿಸುತ್ತಾರೆ. ಹಾಗೆಯೇ ಅದಕ್ಕೆ ಸರ್ವರಿಗೂ ಸಮಾನವಾಗಿರುವಂತಹ ಸಂಹಿತೆ ಬೇಕು ಎಂದು ಹೇಳುತ್ತಾರೆ. ಆದರೆ ಸಂಪೂರ್ಣ ರಾಷ್ಟ್ರಕ್ಕೆ ಒಂದೇ ಸಂಹಿತೆ ಬರಲಿಲ್ಲ. ಅಂದು ಹಿಂದೂ ಕೋಡ್ ಬಿಲ್ ಬಂತು. ಅದರ ಜೊತೆಗೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿ ಇಂದು ಹಿಂದೂ ಕೋಡ್ ಬಿಲ್ ಬಂದಿದೆ, ಮುಂದೊಂದು ದಿನ ಇಡೀ ರಾಷ್ಟ್ರಕ್ಕೆ ಸಮಾನ ಕಾನೂನು ತರಬಹುದು ಎನ್ನುವುದನ್ನು ಸೇರಿಸಿದರು. ಏಕೆಂದರೆ ಸಮಾನ ನಾಗರಿಕ ಕಾನೂನು ದೇಶಕ್ಕೆ ಸಂಬಂಧಪಟ್ಟ ವಿಷಯ, ಅವರವರ ಮತಕ್ಕೆ ಸಂಬಂಧಿಸಿದ್ದಲ್ಲ ಎಂದಿದ್ದರು. ಈಗ ಪ್ರಾರಂಭವಾಗಿರುವ ಸಮಾನ ನಾಗರಿಕ ಸಂಹಿತೆಯ ಚರ್ಚೆ ಅಂಬೇಡ್ಕರರ ಕನಸು. ಇಂದು ಭಾರತ ಅಂಬೇಡ್ಕರ್ ಕನಸಿನ ಭಾರತದತ್ತ ಹೆಜ್ಜೆ ಇಡುತ್ತಿದೆ" ಎಂದರು.

## ನಾವು ಸಮಾಜದಿಂದ ಪ್ರತ್ಯೇಕವಾದ ಸಂಘಟನೆಯಾಗಬೇಕಿಲ್ಲ, ಬದಲಾಗಿ ಇಡೀ ಸಮಾಜವನ್ನು ಸಂಘಟಿಸಬೇಕಿದೆ – ಡಾ. ಮೋಹನ್ ಭಾಗವತ್



**ಬ್ರಹ್ಮಪುರ :** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ಬ್ರಹ್ಮಪುರ (ಬರ್ಹಾನ್‌ಪುರ)ದ ಡಾ.ಹೆಡಗೇವಾರ್ ಸ್ಮಾರಕ ಸಮಿತಿಯ ವತಿಯಿಂದ ನಿರ್ಮಾಣಗೊಂಡ ಹೊಸ ಕಾರ್ಯಾಲಯವನ್ನು ಲೋಕಾರ್ಪಣೆಗೊಳಿಸಿದರು. ಅವರು ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿ "ಸಂಘವು ಇಡಿಯ ಸಮಾಜವನ್ನು ತನ್ನದೆಂದು ಭಾವಿಸುತ್ತದೆ. ಸಂಘ ದೊಡ್ಡದಾಗುತ್ತಾ ಸಮಾಜದ ರೂಪ ತಳೆಯುತ್ತದೆ, ಆಗ ಸಂಘ ಎಂಬ ಹೆಸರು ಅಳಿಸಿ ಹೋಗುತ್ತದೆ. ಇಡಿಯ ಹಿಂದೂ ಸಮಾಜವೇ ಸಂಘಮಯವಾಗುತ್ತದೆ. ಹಾಗಾಗಿ ಸಂಘ ಸಮಾಜದ ಸಹಯೋಗದಿಂದ ನಿರ್ಮಾಣಗೊಂಡಿರುವುದು ಮತ್ತು ಸಮಾಜಕ್ಕೇ ಸಮರ್ಪಣೆಗೊಳ್ಳುತ್ತದೆ" ಎಂದರು.

"ಕಾರ್ಯಾಲಯವು ನಮ್ಮ ಸಂಘಕಾರ್ಯದಲ್ಲಿ ಹೆಚ್ಚಿನ ಸವಲತ್ತು ನೀಡುವುದಲ್ಲದೆ ಯಾರೇ ಹೊಸ ವ್ಯಕ್ತಿ ಸಂಘದ ಜೊತೆ ಜೋಡಿಸಿಕೊಂಡರೂ ಸಂಘದ ವಿಶೇಷತೆಗಳ ಅನುಭವ ಈ ಭವನದಲ್ಲಿ ಆಗಬೇಕಿದೆ. ಸಂಘದ ಕಾರ್ಯ ಸ್ವಾರ್ಥ ಅಥವಾ ಭಯದಿಂದ ನಡೆಯುವುದಿಲ್ಲ. ಆತ್ಮೀಯತೆಯಿಂದ ಮಾತ್ರ ನಡೆಯಲು ಸಾಧ್ಯ. ಯಾಕೆಂದರೆ ಸ್ವಾರ್ಥ ಮತ್ತು ಭಯ ಸ್ಥಾಯಿಯಲ್ಲ. ಹಾಗಾಗಿ ಕಾರ್ಯಾಲಯಕ್ಕೆ ಬರುವಂತಹ ಪ್ರತಿಯೊಬ್ಬ ವ್ಯಕ್ತಿಗೂ ಆತ್ಮೀಯತೆಯ ಅನುಭವ ನೀಡಬೇಕು ಜೊತೆಗೆ ಕಾರ್ಯಾಲಯದ ಶಿಸ್ತನ್ನೂ ಪಾಲಿಸಬೇಕು" ಎಂದರು.

"ಸಂಘದ ಕಾರ್ಯ ಲೋಕ ಸಂಗ್ರಹದ ಕಾರ್ಯ. ಸಂಘದ ಕಾರ್ಯ ಈಶ್ವರೀಯ ಕಾರ್ಯ ಮತ್ತು ಈಶ್ವರೀಯ ಕಾರ್ಯ ಭಗವಂತನೇ ಮಾಡುತ್ತಾನೆ. ಆದರೆ ಅವುಗಳ ನಿಮಿತ್ತಗಳಷ್ಟೇ ನಾವು. ಹಾಗಾಗಿ ಶಾಖೆ ನಡೆಯುತ್ತದೆ. ನಮ್ಮ ಈಶ್ವರೀಯ ಮತ್ತು ಪವಿತ್ರ ಕಾರ್ಯದ ಅನುಭವ ಕಾರ್ಯಾಲಯದ ವಾತಾವರಣದಲ್ಲೂ ಅನುಭವಕ್ಕೆ ಬರಬೇಕಿದೆ. ಸಮಾಜದ ಈ ಸಂಘಟಿತ ಶಕ್ತಿಯಿಂದ ಒಳ್ಳೆಯ ಕಾರ್ಯಗಳು ನಡೆಯಬೇಕಿದೆ. ಇಂತಹ ಶಕ್ತಿಯಿಂದ ಸಜ್ಜನರ ಸುರಕ್ಷೆಯಾಗುತ್ತದೆ ಮತ್ತು ಧರ್ಮ ರಕ್ಷಣೆಯ ಶಕ್ತಿಯೂ ಉತ್ಪನ್ನವಾಗುತ್ತದೆ. ಅಷ್ಟಲ್ಲದೆ ದುರ್ಜನರ ಎದೆಯಲ್ಲೂ ಒಮ್ಮೆ ಭಯ ಮೂಡುತ್ತದೆ" ಎಂದರು.

"ಪೂರ್ಣ ಸಮಾಜ ಸಂಘಟಿತವಾಗಿ ನಮ್ಮ ದೇಶಕ್ಕಾಗಿ ಬದಕಲು ತತ್ಪರರಾಗಿ, ಒಗ್ಗಟ್ಟಾಗಿ ಭೇದ ಮತ್ತು ಸ್ವಾರ್ಥವನ್ನು ಮರೆತು ಜೀವಿಸಬೇಕಿದೆ. ಆಗ ಮಾತ್ರ ದೇಶ ಮುಂದುವರೆಯಲು ಸಾಧ್ಯ. ದೇಶವನ್ನು ಮುನ್ನಡೆಸಲು ಯಾರಿಗೂ ಗುತ್ತಿಗೆ ನೀಡಲು ಸಾಧ್ಯವಿಲ್ಲ. ಸಂಘಕ್ಕೂ ನೀಡಲು ಸಾಧ್ಯವಿಲ್ಲ. ಪೂರ್ತಿ 130ಕೋಟಿ ಜನರ ಸಮಾಜ ಸಂಘಟಿತವಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ" ಎಂದರು.

## ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ತಮಿಳುನಾಡಿನ 45 ಕಡೆಗಳಲ್ಲಿ ಪಥಸಂಚಲನ



**ಚೆನ್ನೈ:** ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಡಿಎಂಕೆಯು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಥಸಂಚಲನಕ್ಕೆ ಅನುಮತಿ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಸಂಘವು ನ್ಯಾಯಾಲಯದ ಮೊರೆಹೋಗಿತ್ತು. 2020 ಹಾಗೂ 2021ರಲ್ಲಿ ಕೋವಿಡ್‌ನ ಕಾರಣದಿಂದ ಪಥಸಂಚಲನವು ನಡೆದಿರಲಿಲ್ಲ. ಆದರೆ ಈ ಬಾರಿಯ ವಿಜಯದಶಮಿಗೆ ತಮಿಳುನಾಡಿನಾದ್ಯಂತ 50 ಕಡೆಗಳಲ್ಲಿ ಪಥಸಂಚಲನಕ್ಕೆ ತಮಿಳುನಾಡಿನ ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದರೂ ನಿರಾಕರಿಸಲಾಗಿತ್ತು. ರಾಜ್ಯ ಸರಕಾರ ಈ ಕುರಿತು ಒತ್ತಡ ಹೇರಿ ಅನುಮತಿ ನೀಡದಂತೆ ತಡೆದಿತ್ತು. ಈ ಕುರಿತು ನ್ಯಾಯಾಲಯದಲ್ಲಿ ಸುಮಾರು 50 ರಿಟ್ ಪಿಟಿಶನ್‌ಗಳನ್ನು ಫೈಲ್ ಮಾಡಿತ್ತು. ಮದ್ರಾಸ್ ಹೈಕೋರ್ಟ್ ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡುವಂತೆ ಆದೇಶ ಹೊರಡಿಸಿತ್ತು. ನ್ಯಾಯಾಲಯದ ಆದೇಶದ ನಂತರವೂ ರಾಜ್ಯ ಸರಕಾರವು ಅದನ್ನು ಪಾಲಿಸಲಿಲ್ಲ. ಕಮ್ಯೂನಿಸ್ಟ್, ವಿಸಿಕೆ, ಕಾಂಗ್ರೆಸ್ ಮೂರೂ ಪಕ್ಷಗಳು ಆದೇಶವನ್ನು ವಿರೋಧಿಸಿ ದ್ವಿ ಸದಸ್ಯ ಪೀಠಕ್ಕೆ 50 ರಿವ್ಯೂ ಪಿಟಿಷನ್ ಸಲ್ಲಿಸಿತು. ಆದರೆ ನ್ಯಾಯಾಲಯವು ಅದನ್ನು ವಜಾಗೊಳಿಸಿತು.

ಇದನ್ನು ಖಂಡಿಸಿ ಸಂಘವು ಕಂಟೆಂಪ್ಟ್ ಆಫ್ ಕೋರ್ಟ್ ಪಿಟಿಶನ್ ಸಲ್ಲಿಸಿದ್ದು, ಇದಕ್ಕೆ ರಾಜ್ಯ ಸರಕಾರವು ಆರ್‌ಎಸ್‌ಎಸ್ ಕಛೇರಿಯ ಮೇಲೆ ಪೆಟ್ರೋಲ್ ಬಾಂಬ್ ದಾಳಿ ಇತ್ಯಾದಿ ಕಾರಣಗಳನ್ನು ನೀಡಿತು. ನಂತರ ಏಕ ಸದಸ್ಯ ಪೀಠವು ಈ ಹಿಂದೆ ನೀಡಿದ್ದ ಅನುಮತಿಯಲ್ಲಿ ಬದಲಾವಣೆ ಮಾಡಿ ಪುನಃ ಆದೇಶ ನೀಡಿ, 23 ಕಡೆಗಳಲ್ಲಿ ಸೀಮಿತ ಸ್ಥಳಗಳ ಪಥಸಂಚಲನ, 3 ಕಡೆಗಳಲ್ಲಿ ಮುಕ್ತ ಸಂಚಲನಕ್ಕೆ ಅನುಮತಿಸಿ, 24 ಸ್ಥಳಗಳ ಸಂಚಲನಕ್ಕೆ ಅನುಮತಿ ನಿರಾಕರಿಸಿತು. ಅದರ ತೀರ್ಪಿನ ಅನ್ವಯ ನವೆಂಬರ್ 6ರಂದು 3 ಕಡೆಗಳಲ್ಲಿ ಪಥಸಂಚಲನಕ್ಕೆ ಪೊಲೀಸರು ಅನುಮತಿ ನೀಡಿದರು.

ಉಳಿದ ಕಡೆಗಳಲ್ಲಿ ಅನುಮತಿ ನೀಡದ ಕಾರಣಕ್ಕೆ ಏಕ ಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಮತ್ತೆ ನ್ಯಾಯಾಲಯದ ಮೊರೆ ಹೋದ ತಮಿಳುನಾಡಿನ ಆರ್‌ಎಸ್‌ಎಸ್ ಈ ಹಿಂದೆ ಎಲ್ಲಾ ಸ್ಥಳಗಳಲ್ಲಿ ನಡೆಸಲು ನೀಡಿದ್ದ ತೀರ್ಪನ್ನು ಎತ್ತಿ ಹಿಡಿಯುವಂತೆ ಮನವಿ ಮಾಡಿತು. ಹೀಗೆ ನಿರಂತರ ಕಾನೂನು ಸಮರ ನಡೆಸಿದ ನಂತರ ತಮಿಳು ನಾಡು ಡಿಜಿಪಿಯವರನ್ನು ಸುಪ್ರಿಂ ಕೋರ್ಟಿನ ಆದೇಶದ ಪ್ರತಿಯೊಂದಿಗೆ ಭೇಟಿ ಮಾಡಿ 2023ರ ಏಪ್ರಿಲ್ 14, 15, 16ರಂದು ಸಂಚಲನ ನಡೆಸಲು ಅನುಮತಿ ಪಡೆದುಕೊಂಡಿತು.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.